ಓ ಎಸ್ ನಂಃ**50/2016**
ಪಿ.ಡಬ್ಲ್ಯುಃ **1**
<u>ದಿನಾಂಕಃ 19-08-2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

<u>ಪಾಟೀ ಸವಾಲುಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ-</u>

ನಮ್ಮ ಕುಟುಂಬದವರ ಮೂಲ ಹುಣಸಘಟ್ಟ. ನಾನು ನನ್ನ ಅಜ್ಜ ಮಲ್ಲಪ್ಪನವರನ್ನು ನೋಡಿಲ್ಲ. ನಮ್ಮ ಊರಿನವರಿನಲ್ಲಿ ಸಾಹುಕಾರ್ ಮಲ್ಲಪ್ಪನವರ ಕುಟುಂಬ ಎಂದು ಕರೆಯುತ್ತಾರೆಂದರೆ ಸರಿ. ನನ್ನ ದೊಡ್ಡಪ್ಪ ಮಲ್ಲಕಾರ್ಜುನಪ್ಪನವರು ಕಾನೂನು ಪದವೀಧರರಾಗಿದ್ದರೆಂದರೆ ಸರಿ. ನನ್ನ ತಂದೆ ನನ್ನ ಅಜ್ಜನಿಗೆ ಕೊನೆಯ ಮಗ ಎಂದರೆ ಸರಿ. ನನ್ನ ತಂದೆ 1954 ರ ಮೊದಲೆ ಬಿ ಎಸ್ಸಿ ಪದವಿಯನ್ನು ಮಾಡಿದಂತಹ ವ್ಯಕ್ತಿ ಎಂದರೆ ಸರಿ. ರುದ್ರಪ್ಪ ಹಾಗೂ ಚಂದ್ರಶೇಖರಪ್ಪನವರು ನಮ್ಮ ತಂದೆಯಷ್ಟು ವಿದ್ಯಾಭ್ಯಾಸ ಮಾಡಿರಲಿಲ್ಲ. ನನ್ನ ದೊಡ್ಡಪ್ಪ ಮಲ್ಲಿಕಾರ್ಜುನಪ್ಪ ತರೀಕೆರೆ ವಿಧಾನ ಸಭಾ ಕ್ಷೇತ್ರದಲ್ಲಿ ಒಮ್ಮೆ ಶಾಸಕರಾಗಿದ್ದರೆಂದರೆ ಸರಿ. ಅಡಿಕೆ ಮಂಡಿ ಪ್ರಾರಂಭವಾದ ನಂತರ ನಮ್ಮ ತಂದೆ ಹಾಗೂ ದೊಡ್ಡಪ್ಪ ಶಿವಮೊಗ್ಗದಲ್ಲಿ ವಾಸವಿದ್ದರು. ಅವರು 1954 ಕ್ಕೂ ಮೊದಲಿನಿಂದಲೂ ಶಿವಮೊಗ್ಗದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಮೊದಲಿನಿಂದಲೂ ನಿಮ್ಮ ಕುಟುಂಬದವರು ಲೇವಾದೇವಿ ವ್ಯವಹಾರ ಮಾಡುತಿತದ್ದರು ಎಂರದೆ ಸಾಕ್ಷಿ ರುದ್ರಪ್ಪನವರು ಲೇವಾದೇವಿ ವ್ಯವಹಾರ ಮಾಡುತ್ತಿದ್ದರೆನ್ನುತ್ತಾರೆ. ನಮ್ಮ ಕುಟುಂಬದವರೆಲ್ಲರೂ ಸೇರಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದರೆಂದರೆ ಸರಿಯಲ್ಲ. ನಮ್ಮ ಅಜ್ಜ ಬದುಕಿರುವಾಗ ಅವರು ವ್ಯವಹಾರ ಮಾಡುತ್ತಿದ್ದು, ಆ ನಂತರ ಅವರೆಲ್ಲಾ ಮಕ್ಕಳು ಕುಟುಂಬದ ಪರವಾಗಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದರೆಂದರೆ ಸರಿಯಲ್ಲ. 1944 ರಲ್ಲಿ ಶಿವಮೊಗ್ಗದ ಅಡಿಕೆ ಮಂಡಿ ಆರಂಭವಾಗಿರುತ್ತದೆ. ಸದರಿ ಮಂಡಿಯ ಹೆಸರು ಮಲ್ಲಿಕಾರ್ಜುನಪ್ಪ ಅಂಡ್ ಕಂಪನಿ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಬೇರೆ ಹೆಸರು ಇತ್ತು. ಆ ನಂತರ ಮಲ್ಲಿಕಾರ್ಜುನಪ್ಪ ಅಂಡ್ ಕಂಪನಿ ಎಂದು ಹೆಸರಿಡಲಾಗಿರುತ್ತದೆನ್ನುತ್ತಾರೆ. ಮೊದಲು ಅಡಿಕೆ ಮಂಡಿಯಲ್ಲಿ ನಮ್ಮ ತಂದೆ ಹಾಗೂ ಅವರ ಸಹೋದರರು ಆರಂಭ ಮಾಡಿದ್ದರು. ಕಾಲಕ್ರಮೇಣ ಅವರ ಕೆಲವು ಮಕ್ಕಳು ಸೇರಿಕೊಂಡಿರುತ್ತಾರೆ 1983 ರಲ್ಲಿ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾದವು, ಅಲ್ಲದೇ ಕಂಪನಿಯ ವಿಘಟನೆ ನೋಟೀಸನ್ನು ನಮ್ಮ ತಂದೆ ನೀಡಿದ್ದರು ಎನ್ನುತ್ತಾರೆ. ನಂತರ ಸದರಿ ಕಂಪನಿ ವಿಘಟನೆಯಾಗಿರುತ್ತದೆ, ಆದರೆ ಯಾವ ವರ್ಷ ಎಂದು ನನಗೆ ನೆನಪಿಲ್ಲ. 1954 ಕ್ಕೆ ಮೊದಲೇ ಶಿವಮೊಗ್ಗದಲ್ಲಿ ಅವಲಕ್ಕಿ ಬೀದಿಯಲ್ಲಿ ನಮ್ಮ ಕುಟುಂಬಕ್ಕೆ ಅಂದರೆ ಸಾಹುಕಾರ್ ಮಲ್ಲಪ್ಪನವರ ಕುಟುಂಬಕ್ಕೆ ಸೇರಿದ ಮನೆ ಇತ್ತು ಎಂದರೆ ನನಗೆ ಗೊತ್ತಿಲ್ಲ, ಅದರಲ್ಲಿ ಮಲ್ಲಕಾರ್ಜುನಪ್ಪನವರು ವಾಸ ಮಾಡುತ್ತಿದ್ದರೆಂದರೆ ನನಗೆ ಗೊತ್ತಿಲ್ಲ. ಶಿಮೊಗ್ಗದ ಅಡಿಕೆ ಮಂಡಿ ಗೋಡೋನ್ ನೋಡಿದ್ದೇನೆ. ಅದು ಅಶೋಕ ರಸ್ತೆಯಲ್ಲಿದೆ. ಅದಕ್ಕೆ ಮೊದಲು ಅವಲಕ್ಕಿ ಬೀದಿ ಅಂತ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅಡಿಕೆ ಮಂಡಿಯ ವಿಸ್ತೀರ್ಣ 60 ಇಂಟು 100 ಅಡಿಗಳೆಂದರೆ ಸರಿ. 1955-56 ರ ವರ್ಷದಲ್ಲಿಯೇ ಅದನ್ನು ಆರ್ ಸಿ ಸಿ ಕಟ್ಟಡವಾಗಿ ಕಟ್ಟಲಾಗಿತ್ತು ಎಂದರೆ ಇರಬಹುದು. ಪಕ್ಕದಲ್ಲಿಯೇ ಒಂದು ವಾಸದ ಮನೆಕಟ್ಟ ಲಾಗಿತ್ತು ಎಂದರೆ ಸರಿ. ಸದರಿ ಮನೆಯಲ್ಲೇ ನನ್ನ ದೊಡ್ಡಪ್ಪ ಮಲ್ಲಿಕಾರ್ಜುನಪ್ಪ ಹಾಗೂ ನನ್ನ ತಂದೆ ವಾಸವಿದ್ದರೆಂದರೆ ಸರಿ. ರುದ್ರಪ್ಪ ಹಾಗೂ ಚಂದ್ರಶೇಖರಪ್ಪನವರು ಹುಣಸಘಟ್ಟ ಗ್ರಾಮದಲ್ಲಿ ವಾಸವಿದ್ದರೆಂದರೆ ಸರಿ.

ನಾನು ತಿಲಕ್ ನಗರದಲ್ಲಿ ಇರುವುದಿಲ್ಲ. ನಾನು ವಿನೋಬಾ ನಗರದಲ್ಲಿದ್ದೇನೆ. ನಾನು ವಾಸ ಮಾಡುತ್ತಿರುವ ಮನೆ ಮತ್ತು ನಿವೇಶನದ ವಿಸ್ತೀರ್ಣ 60 ಇಂಟು 40 ಆಗಿರುತ್ತದೆ. ಗೋಡೋನ್ ಪಕ್ಕದಲ್ಲಿರುವ ಮನೆ ನನ್ನ ದೊಡ್ಡಪ್ಪ ಮಲ್ಲಿಕಾರ್ಜುನಪ್ಪನವರ ಪಾಲಿಗೆ ಬಂದಿರುತ್ತದೆಂದರೆ ಸಾಕ್ಷಿದಾರರು ದಾಖಲೆ ನೋಡಿ ಹೇಳಬೇಕು ಇರಬಹುದು ಅನ್ನುತ್ತಾರೆ. ನಮಗೆ ಇದ್ದ ಗೋಡೋನ್ ನಲ್ಲಿ ತಲಾ 15 ಇಂಟು 100 ಅಡಿಗಳಷ್ಟು ವಿಸ್ತೀರ್ಣವನ್ನು ಕೊಡಲಾಗಿರುತ್ತದೆಂದರೆ ಸಾಕ್ಷಿ ದಾಖಲೆ ನೋಡಬೇಕೆನ್ನುತ್ತಾರೆ. ನನ್ನ ದೊಡ್ಡ ದೊಡ್ಡಪ್ಪ ರುದ್ರಪ್ಪನವರಿಗೆ ಶಿವಮೊಗ್ಗದಲ್ಲಿ 3 ಅಂಕಣ ಮನೆಯನ್ನು ಕೊಡಲಾಗಿದೆ ಎಂದರೆ ಸಾಕ್ಷಿದಾಖಲೆ ನೋಡಬೇಕೆನ್ನುತ್ತಾರೆ. ಅವರು ಕುಟುಂಬದ ದೊಡ್ಡವರಾಗಿದ್ದರಿಂದ ಅವರಿಗೆ ಹೆಚ್ಚಿನ ವಿಸ್ತೀರ್ಣದ ಮನೆಕೊಡಲಾಗಿದೆ ಎಂದರೆ ಸಾಕ್ಷಿ ದಾಖಲೆ ನೋಡಬೇಕೆನ್ನುತ್ತಾರೆ. ನಮ್ಮ ತಂದೆಗೆ ವಿಭಾಗವಾದಾಗ ಯಾವುದೇ ಮನೆಯನ್ನು ಶಿವಮೊಗ್ಗದಲ್ಲಿ ಕೊಟ್ಟಿರಲಿಲ್ಲ ಎಂದರೆ ಸರಿ. ಅವರಿಗೆ ಆ ಕಾರಣ 45 ಇಂಟು 65, 80 ಇಂಟು 90 ಎರಡು ನಿವೇಶನಗಳನ್ನು ಶಿವಮೊಗ್ಗ ನಗರದಲ್ಲಿ ಕೊಡಲಾಗಿತ್ತು ಎಂದರೆ ಸರಿಯಲ್ಲ. ವಿಭಾಗಪತ್ರದಲ್ಲಿ ಡಿ ಶೆಡ್ಯೂಲ್ ಮುಖಾಂತರ ನನ್ನ ತಂದೆಗೆ ಪಾಲು ಬಂದಿರುತ್ತದೆಂದರೆ ಸರಿ

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯ್ತು)**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-

**(ಎಂ ಸಿ ನಂಜೇಗೌಡ)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.